# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 835
ಮಾನ್ಯ ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 15.12.2025
ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಪದೇ ಪದೇ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ನಡೆಯುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ; ಕಳೆದ ಎರಡು ವರ್ಷಗಳಲ್ಲಿ ಎಷ್ಟು ಭ್ರೂಣ ಹತ್ಯೆ ಪ್ರಕರಣಗಳು ವರದಿಯಾಗಿದೆ; (ಪ್ರಕರಣವಾರು ವಿವರವನ್ನು ಜಿಲ್ಲಾವಾರು ನೀಡುವುದು)</td><td>ಗಮನಕ್ಕೆ ಬಂದಿದೆ.<br><br>ಕಳೆದ ಎರಡು ವರ್ಷಗಳಲ್ಲಿ ಒಟ್ಟು 03 ಪ್ರಕರಣಗಳು ದಾಖಲಾಗಿರುತ್ತವೆ. ವಿವರ ಕೆಳಗಿನಂತಿರುತ್ತದೆ.<br><br><table>
<tr><th>ಕ್ರ. ಸಂ</th><th>ಜಿಲ್ಲೆಯ ಹೆಸರು</th><th>ಆಸ್ಪತ್ರೆಯ ಹೆಸರು</th><th>ಪ್ರಕರಣಗಳ ಸಂಖ್ಯೆ</th></tr>
<tr><td>01</td><td>ಬೆಂಗಳೂರು ಗ್ರಾಮಾಂತರ</td><td>SPG ಆಸ್ಪತ್ರೆ</td><td>01</td></tr>
<tr><td>02</td><td>ಮಂಡ್ಯ</td><td>ಪಾಂಡವಪುರದ ಸರ್ಕಾರಿ ವಸತಿ ಗೃಹ</td><td>01</td></tr>
<tr><td>03</td><td>ಬೆಂಗಳೂರು ನಗರ</td><td>ದ್ಯಾನಿಶ್ ಪಾಲಿ ಕ್ಲಿನಿಕ್</td><td>01</td></tr>
</table></td></tr>
<tr><td>ಆ)</td><td>ಭ್ರೂಣ ಹತ್ಯೆ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಎಷ್ಟು ದೂರುಗಳು ದಾಖಲಾಗಿವೆ; ಬಂಧಿತರ ಸಂಖ್ಯೆ ಎಷ್ಟು; ಈ ಪ್ರಕರಣಗಳ ತನಿಖೆ ಯಾವ ಹಂತದಲ್ಲಿದೆ; (ಪ್ರಕರಣವಾರು ಸಮಗ್ರ ವಿವರ ನೀಡುವುದು) ಎಷ್ಟು ಭ್ರೂಣ ಲಿಂಗ ಪರೀಕ್ಷೆ ನಡೆದಿದೆ;</td><td>ಭ್ರೂಣ ಹತ್ಯೆ ಪ್ರಕರಣಗಳಿಗೆ ಸಂಬಂದಪಟ್ಟಂತೆ ಒಟ್ಟು 03 ದೂರುಗಳು ದಾಖಲಾಗಿವೆ.<br><br>ಸದರಿ ಪ್ರಕರಣಗಳಲ್ಲಿ 13 ಜನರನ್ನು ಬಂಧಿಸಿದ್ದು ವಿವರವು ಕೆಳಗಿನಂತಿರುತ್ತದೆ.<br><br><table>
<tr><th>ಕ್ರ. ಸಂ</th><th>ಜಿಲ್ಲೆಯ ಹೆಸರು</th><th>ಆಸ್ಪತ್ರೆಯ ಹೆಸರು</th><th>ಬಂಧಿತರ ಸಂಖ್ಯೆ</th><th>PCR / CC/ FIR no:</th></tr>
<tr><td>01</td><td>ಬೆಂಗಳೂರು ಗ್ರಾಮಾಂತರ</td><td>ಎಸ್.ಪಿ.ಜಿ. ಆಸ್ಪತ್ರೆ</td><td>06</td><td>CC no: 10250/23</td></tr>
<tr><td>02</td><td>ಮಂಡ್ಯ, ಪಾಂಡವಪುರ</td><td>ಸರ್ಕಾರಿ ವಸತಿ ಗೃಹ</td><td>06</td><td>CR no: 0151 /24</td></tr>
<tr><td>04</td><td>ಬೆಂಗಳೂರು ನಗರ</td><td>ದ್ಯಾನಿಶ್ ಪಾಲಿ ಕ್ಲಿನಿಕ್</td><td>01</td><td>FIR no: 286/25</td></tr>
</table><br>ಮೇಲಿನ ಪ್ರಕರಣಗಳ ತನಿಖೆಯು ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ.<br><br>ಕೆಳಕಂಡ ಜಿಲ್ಲೆಗಳಲ್ಲಿ ಭ್ರೂಣ ಲಿಂಗ ಪರೀಕ್ಷೆ ನಡೆದಿರುವ ಬಗ್ಗೆ ಸಂಶಯವಿದ್ದು, ಪಿ.ಸಿ. & ಪಿ.ಎನ್.ಡಿ.ಟಿ. ಕಾಯ್ದೆಯನ್ನು ಉಲ್ಲಂಘಿಸಿರುವುದರಿಂದ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, 2002 ರಿಂದ 2025 ರ ವರೆಗಿನ ವಿವರವು ಕೆಳಗಿನಂತಿರುತ್ತದೆ.<br><br><table>
<tr><th>ಕ್ರ. ಸಂ</th><th>ಜಿಲ್ಲೆಯ ಹೆಸರು</th><th>ಭ್ರೂಣ ಲಿಂಗ ಪರೀಕ್ಷೆಯ ವಿವರ</th></tr>
<tr><td>1</td><td>ಬೆಂಗಳೂರು ನಗರ</td><td>01</td></tr>
<tr><td>2</td><td>ಬೆಂಗಳೂರು ಗ್ರಾಮಾಂತರ</td><td>01</td></tr>
<tr><td>3</td><td>ಬೆಳಗಾವಿ</td><td>01</td></tr>
</table></td></tr>
</table>

<table>
<tr><td></td><td></td><td>
<table>
<tr><td>4</td><td>ಮೈಸೂರು</td><td>01</td></tr>
<tr><td>5</td><td>ರಾಮನಗರ</td><td>01</td></tr>
<tr><td>6</td><td>ಚಿತ್ರದುರ್ಗ</td><td>01</td></tr>
<tr><td>7</td><td>ಶಿವಮೊಗ್ಗ</td><td>01</td></tr>
<tr><td>8</td><td>ಮಂಡ್ಯ</td><td>01</td></tr>
<tr><td>9</td><td>ಹಾಸನ</td><td>01</td></tr>
<tr><td>10</td><td>ಬಾಗಲಕೋಟೆ</td><td>03</td></tr>
<tr><td colspan="2">ಒಟ್ಟು</td><td>12</td></tr>
</table>
</td></tr>
<tr><td>ಇ)</td><td>ಈ ಹಿಂದೆ ಬೆಳಕಿಗೆ ಬಂದಿದ್ದ ಭ್ರೂಣ ಹತ್ಯೆ ಪ್ರಕರಣಗಳಲ್ಲಿ ಶಾಮೀಲಾಗಿದ್ದ ಸರ್ಕಾರಿ ಅಧಿಕಾರಿ/ನೌಕರರ ವಿರುದ್ಧ ಕೈಗೊಂಡಿರುವ ಕ್ರಮಗಳೇನು; (ನೌಕರರ ವಿವರ ನೀಡುವುದು)</td><td>ಡಾ. ಶಶಿ ಎಸ್.ಎಲ್., ರೇಡಿಯಾಲಜಿಸ್ಟ್ ಇವರು ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ಭ್ರೂಣ ಲಿಂಗ ಪತ್ತೆಗೆ ಸಂಬಂಧಿಸಿದ ಪ್ರಕರಣದಲ್ಲಿ ಶಾಮೀಲಾಗಿರಬೇಕೆಂಬ ಹಿನ್ನೆಲೆಯಲ್ಲಿ, ಸದರಿ ಅಧಿಕಾರಿಯನ್ನು ಸೇವೆಯಿಂದ ದಿನಾಂಕ: 03-09-2025 ಅಮಾನತ್ತುಗೊಳಿಸಿದೆ.</td></tr>
<tr><td>ಈ)</td><td>ಜಿಲ್ಲಾ ಆಸ್ಪತ್ರೆಗಳಲ್ಲಿ ಭ್ರೂಣ ಲಿಂಗ ಪತ್ತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಪ್ರಕರಣ ತನಿಖೆಯಲ್ಲಿ ಈವರೆಗೆ ಕಂಡು ಬಂದಿರುವ ಅಂಶಗಳೇನು; ತಪ್ಪಿತಸ್ಥರ ವಿರುದ್ಧ ಕೈಗೊಂಡಿರುವ ಕ್ರಮವೇನು;</td><td>ಗಮನಕ್ಕೆ ಬಂದಿದೆ.<br>ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ರೇಡಿಯಾಲಜಿಸ್ಟ್ ಡಾ: ಶಶಿ ಎಸ್.ಎಲ್. ಭ್ರೂಣ ಲಿಂಗ ಪತ್ತೆ ಮಾಡುತ್ತಿದ್ದು, ದಿನಾಂಕ: 25-08-2025 ರಂದು ರಾಜ್ಯ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಗುಪ್ತ ಕಾರ್ಯಾಚರಣೆ ನಡೆಸಿದ್ದು, ಸದರಿ ವೈದ್ಯರ ವಿರುದ್ಧ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಪಿ.ಸಿ.ಆರ್. 401/2025 ದಿನಾಂಕ: 03-09-2025 ರಂದು ಪ್ರಕರಣ ದಾಖಲಿಸಲಾಗಿದೆ.<br>ಅದರಂತೆ BNSS, 2023 ರ ಕಲಂ 227ನ ಅಧಿಕಾರವನ್ನು ಬಳಸಿ ನ್ಯಾಯಾಲಯವು 29-10-2025 ರಂದು CC No.2519/2025 ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿ, ಆರೋಪಿಗಳಿಗೆ ಸಮನ್ಸ್ ಜಾರಿಗೊಳಿಸಲು ಆದೇಶ ಹೊರಡಿಸಲಾಗಿದೆ.</td></tr>
<tr><td>ಉ)</td><td>ಹೆಣ್ಣು ಭ್ರೂಣ ಹತ್ಯೆಯನ್ನು ಶಾಶ್ವತವಾಗಿ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಸರ್ಕಾರ ಕೈಗೊಂಡಿರುವ ಕ್ರಮಗಳು ವಿಫಲವಾಗಿದೆಯೇ? (ಸಮಗ್ರವಾಗಿ ವಿಶ್ಲೇಷಿಸುವುದು)</td><td>ಹೆಣ್ಣು ಭ್ರೂಣ ಹತ್ಯೆಯನ್ನು ತಡೆಗಟ್ಟಲು ಕೆಳಕಾಣಿಸಿದಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>• ಪಿ.ಸಿ. & ಪಿ.ಎನ್.ಡಿ.ಟಿ. ಕಾಯ್ದೆಯಡಿ ಬರುವ ಎಲ್ಲಾ ಶಾಸನಬದ್ಧ ಸಮಿತಿಗಳು ರಾಜ್ಯ ಮತ್ತು ಜಿಲ್ಲೆಗಳಲ್ಲಿ ರಚನೆಗೊಂಡಿರುತ್ತದೆ.<br>• ರಾಜ್ಯದಿಂದ "ಬಾಲಿಕಾ" ಆನ್‌ಲೈನ್ ಸಾಫ್ಟ್‌ವೇರ್ ಮುಖಾಂತರ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳನ್ನು ಕಡ್ಡಾಯವಾಗಿ ನೋಂದಣಿ ಮತ್ತು ನವೀಕರಣ ನಡೆಸಲಾಗುತ್ತಿದೆ.<br>• ಅಲ್ಟ್ರಾಸೌಂಡ್ ತಯಾರಕರು, ಮಾರಾಟಗಾರರು, ರಿಪೇರಿ ಮಾಡುವವರನ್ನು ರಾಜ್ಯ ಮಟ್ಟದಲ್ಲಿ ನೋಂದಾಯಿಸಿ, ತ್ರೈಮಾಸಿಕ ವರದಿಯನ್ನು ಪಡೆಯಲಾಗುತ್ತಿದೆ.<br>• ರಾಜ್ಯದಲ್ಲಿ ಇದುವರೆಗೂ ಪಿ.ಸಿ. & ಪಿ.ಎನ್.ಡಿ.ಟಿ. ಕಾಯ್ದೆಯನ್ನು ಉಲ್ಲಂಘಿಸಿರುವ ಸ್ಕ್ಯಾನಿಂಗ್ ಸೆಂಟರ್ / ಮಾಲೀಕರು / ವೈದ್ಯರ ವಿರುದ್ಧ ಒಟ್ಟು 149 ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದ್ದು, 80 ಪ್ರಕರಣಗಳು ದಂಡ ವಿಧಿಸಿ ಖುಲಾಸೆಗೊಂಡಿದ್ದು, 69 ಪ್ರಕರಣಗಳು ನ್ಯಾಯಾಲಯದಲ್ಲಿ ವಿವಿಧ ಹಂತದಲ್ಲಿ ಬಾಕಿಯಿರುತ್ತದೆ.<br>• ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಮಾಡುವಂತಹ ಸ್ಕ್ಯಾನಿಂಗ್ ಸೆಂಟರ್ / ಆಸ್ಪತ್ರೆ / ವೈದ್ಯರು / ದಲ್ಲಾಳಿಗಳು / ಗರ್ಭಿಣಿಯರ ಸಂಬಂಧಿಕರ</td></tr>
</table>

ವಿರುದ್ಧ ಮಾಹಿತಿ ನೀಡಿ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಸಹಕರಿಸುವ ಮಾಹಿತಿದಾರರಿಗೆ ರಾಜ್ಯ ಸರ್ಕಾರದಿಂದ ರೂ.50,000/- ಕ್ಕೆ ಇದ್ದ ಬಹುಮಾನವನ್ನು ರೂ.1,00,000/- ಗಳಿಗೆ ಏರಿಸಲಾಗಿದೆ.

- ಪಿ.ಸಿ. & ಪಿ.ಎನ್.ಡಿ.ಟಿ. ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯ ಕಾರ್ಯಪಡೆಯನ್ನು ರಚಿಸಲಾಗಿದೆ.
- ಎಂ.ಬಿ.ಬಿ.ಎಸ್. ಪದವಿ ಹೊಂದಿ ಸ್ಕ್ಯಾನಿಂಗ್ ಸೆಂಟರ್ ನಡೆಸುತ್ತಿರುವ ವೈದ್ಯರಿಗೆ ಸಾಮರ್ಥ್ಯ ಆಧಾರಿತ ಪರೀಕ್ಷೆ (Competency Based Test) ಮತ್ತು ಸ್ಕ್ಯಾನಿಂಗ್ ಮಾಡಲು ಅರ್ಹ ತರಬೇತಿಯನ್ನು ಇಲಾಖೆ ವತಿಯಿಂದ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ನಡೆಸಲಾಗುತ್ತಿದೆ.
- ರಾಜ್ಯ ಮಟ್ಟದಿಂದ ಕೆಳಕಾಣಿಸಿದ ಜಿಲ್ಲೆಗಳಲ್ಲಿ ಗುಪ್ತ ಕಾರ್ಯಚಾರಣೆಯನ್ನು ಕೈಗೊಳ್ಳಲಾಗಿದೆ.

| ಕ್ರ. ಸಂ | ಜಿಲ್ಲೆಯ ಹೆಸರು | ಆಸ್ಪತ್ರೆಯ ಹೆಸರು | ಗುಪ್ತ ಕಾರ್ಯಾಚರಣೆ ನಡೆಸಿದ ದಿನಾಂಕ |
|---|---|---|---|
| 1 | ಮಂಡ್ಯ | ಸರ್ಕಾರಿ ಕ್ಯಾಟ್ರಿಸ್, ಪಾಂಡವಪುರ | 05-05-2024 |
| 2 | ಬೆಳಗಾವಿ | ಇಕ್ರಾ ಆಸ್ಪತ್ರೆ, ಗೋಕಾಕ್ | 15-07-2024 |
| 3 | ಮಂಡ್ಯ | ಖಾಸಗಿ ಮನೆ, ನಾಗಮಂಗಲ | 15-08-2024 |
| 4 | ಕೋಲಾರ | ದೀಪಕ್ ನರ್ಸಿಂಗ್ ಹೋಂ. | 29-10-2024 |
| 5 | ರಾಮನಗರ | ಜಿಲ್ಲಾ ಆಸ್ಪತ್ರೆ | 22-08-2025 |
| 6 | ಆಂಧ್ರಪ್ರದೇಶ, ಕರ್ನೂಲ್ ಜಿಲ್ಲೆ, ಕಡಮೂರು ತಾಲ್ಲೂಕು | ಬಾಷಾ ನರ್ಸಿಂಗ್ ಹೋಂ | 21-09-2025 |
| 7 | ಮೈಸೂರು | ಖಾಸಗಿ ಮನೆ, ಬನ್ನೂರು ತಾಲ್ಲೂಕು | 22-10-2025 |

- ಪಿ.ಸಿ. & ಪಿ.ಎನ್.ಡಿ.ಟಿ. ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ 2024-25 ನೇ ಸಾಲಿನಲ್ಲಿ ಬಸ್ ಬ್ರ್ಯಾಡಿಂಗ್, ಟ್ರೈನ್ ಬ್ರ್ಯಾಡಿಂಗ್, ಹೋರ್ಡಿಂಗ್ಸ್, ಗೋಡೆ ಬರಹ, ರೇಡಿಯೋ ಜಿಂಗಲ್ಸ್, ಟಿ.ವಿ. ಸ್ಪಾಟ್ಸ್ ಮುಖಾಂತರ ಸಾರ್ವಜನಿಕರಿಗೆ ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆಯ ಕುರಿತು ಅರಿವು ಮೂಡಿಸಲಾಗುತ್ತಿದೆ.
- ಪಿ.ಸಿ. & ಪಿ.ಎನ್.ಡಿ.ಟಿ. ಕಾಯ್ದೆಯ ಬಗ್ಗೆ ರಾಜ್ಯ ಮಟ್ಟದಿಂದ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕಾಲ ಕಾಲಕ್ಕೆ ಅರಿವು ಮೂಡಿಸುವ ಕಾರ್ಯಾಗಾರವನ್ನು ನಡೆಸಲಾಗುತ್ತಿದೆ.

**ಸಂಖ್ಯೆ: ಆಕುಕ 119 ಎಸ್.ಟಿ.ಕ್ಯೂ 2025**

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು